ಓ.ಎಸ್.ನಂ.**161/2010**
ಡಿಡಬ್ಲ್ಯೂ .**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **12.12.2024**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ವಾಟೀ ಸವಾಲುಃ **9** ಮತ್ತು **10**ನೇ ಪ್ರತಿವಾದಿಗಳ ಪರ ಶ್ರೀ ಎಂ.ಕೆ.ಎಂ. ವಕೀಲರಿಂದ

ನಾಗರತ್ನಮ್ಮನವರು ಸುಬ್ಬಣ್ಣನ ಸೊಸೆ. ಅಭಿಲಾಷ್ ಎಂದರೆ ಸುಬ್ಬಣ್ಣನ ದೊಡ್ಡ ಮಗನ ಎರಡನೇ ಹೆಂಡತಿಯ ಮಗ. ರಾಮಾಂಜಿನಪ್ಪನವ ಮೊದಲನೇಹೆಂಡತಿ ಹೆಸರು ನಾಗರತ್ನಮ್ಮ. ಸದರಿ ನಾಗರತ್ನಮಳಿಗೆ ಒಬ್ಬನೇ ಗಂಡು ಮಗನಿದ್ದಾನೆ, ಅವನ ಹೆಸರು ಜಗದೀಶ್. ರಾಮಾಂಜಿನಪ್ಪನವರ **2**ನೇ ಹೆಂಡತಿಯ ಹೆಸರು ಮುನಿತಾಯಮ್ಮ. ಆಕೆಯ ಮಗ ಅಭಿಲಾಷ್. ನಾಗರತ್ನಮ್ಮ ಬದುಕಿದ್ದಾಗ ರಾಮಾಂಜಿನಪ್ಪನವರು ಎರಡನೇ ಮದುವೆಯಾಗಿದ್ದಾರಾ ಎಂದರೆ ಗೊತ್ತಿಲ್ಲ. ಸುಬ್ಬಣ್ಣನ ಕುಟುಂಬದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ನಾನು ಸುಬ್ಬಣ್ಣನ ಕೊನೆಯ ಮಗಳನ್ನು **1985** ರಲ್ಲಿ ಮದುವೆಯಾಗಿದ್ದೇನೆ. ನನ್ನ ಮದುವೆಯಾದ ನಂತರ ಸುಬ್ಬಣ್ಣನ ಮನೆಯಲ್ಲಿ ಆದ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ದಿನಾಂಕಃ**27.03.1983** ವಿಭಾಗವಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಮತ್ತು ನನ್ನ ಹೆಂಡತಿ ಗಾಯತ್ರಮ್ಮ ಓಬದೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇವೆ. ಸುಬ್ಬಣ್ಣನವರು ಮೃತಪಟ್ಟು **20** ವರ್ಷದ ಮೇಲಾಗಿದೆ. ಸುಬ್ಬಣ್ಣನವರಿಗೆ ಒಟ್ಟು ಮೂರು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳಿದ್ದಾರೆ. ದಿನಾಂಕಃ**27.03.1983** ರ ವಿಭಾಗ ಪತ್ರದಂತೆ ಎ ಷಡ್ಯೂಲ್ ಸ್ವತ್ತು ರಾಮಾಂಜಿನಪ್ಪನವರಿಗೆ, ಬಿ ಷಡ್ಯೂಲ್ – ನರಸಿಂಹಮೂರ್ತಿಯವರಿಗೆ, ಸಿ ಷಡ್ಯೂಲ್ – ಶಾಮಣ್ಣನವರಿಗೆ ಹಾಗೂ ಡಿ ಷಡ್ಯೂಲ್ – ನನ್ನ ಹೆಂಡತಿಯಾದ ಗಾಯತ್ರಮ್ಮನಿಗೆ, ಇ ಷಡ್ಯೂಲ್ – ಹುಚ್ಚಮ್ಮನಿಗೆ, ಎಫ್ ಷಡ್ಯೂಲ್ – ಸುಬ್ಬಣ್ಣನಿಗೆ ಹೋಗಿದೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಂತೆ ಅವರವರ ಹೆಸರಿಗೆ ಖಾತೆ

ಬದಲಾವಣೆಯಾಗಿದೆ ಎಂದರೆ ಗೊತ್ತಿಲ್ಲ. ಸುಬ್ಬಣ್ಣನ ಮಕ್ಕಳು ಎಷ್ಟು ವರ್ಷದಿಂದ ಬೇರೆ ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗದಲ್ಲಿ ಸುಬ್ಬಣ್ಣನವರಿಗೆ ಎಷ್ಟು ಐಟಂ ಸ್ವತ್ತುಗಳು ಬಂದಿದ್ದವು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳ ರೆವಿನ್ಯೂ ದಾಖಲಾತಿಗಳನ್ನು ನಾನು ನೋಡಿಲ್ಲ. ಸುಬ್ಬಣ್ಣನವರು ಬದುಕಿದ್ದಾಗಲೇ ಅವರ ಹಿಸ್ಸೆಗೆ ಬಂದ ಸರ್ವೆ ನಂ.**35/1** ರಲ್ಲಿ **1** ಎಕರೆ **3** ಗುಂಟೆ ಜಮೀನನ್ನು ಸಿ.ಹನುಮಂತಪ್ಪನವರಿಗೆ ದಿನಾಂಕ:**24.09.1994** ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದರ ಪ್ರಕಾರ ಸಿ.ಹನುಮಂತಪ್ಪನವರು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಸುಬ್ಬಣ್ಣನ ಮಗನಾದ ನರಸಿಂಹಮೂರ್ತಿಯವರು ಅವರು ಹಿಸ್ಸೆಗೆ ಬಂದ ಸರ್ವೆ ನಂ.**26/2** ರಲ್ಲಿ **2** ಎಕರೆ ಜಮೀನನ್ನು ವೈ. ರಾಜಣ್ಣನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸುಬ್ಬಣ್ಣನವರು ಸರ್ವೆ ನಂ.**24** ರ ಪೈಕಿ **1** ಎಕರೆ **3** ಗುಂಟೆ ಜಮೀನನ್ನು ದಿನಾಂಕ:**05.03.1994** ರಂದು ಎ.ಗೋವಿಂದಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸುಬ್ಬಣ್ಣನವರು ಅವರ ಜೀವಿತಾ ಕಾಲದಲ್ಲಿ ದಿನಾಂಕ:**14.11.1995** ರಲ್ಲಿ ಅವರ ಮೊಮ್ಮಗನಿಗೆ ವಿಲ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸುಬ್ಬಣ್ಣನವರು ಮಾರಾಟ ಮಾಡಿದ ಆಸ್ತಿಗಳ ಕ್ರಯಪತ್ರಗಳ ಪ್ರತಿಗಳನ್ನು ನಾನು ಪಡೆದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಬ್ಬಣ್ಣನವರು ಕ್ರಯಕ್ಕೆ ಕೊಟ್ಟ ಆಸ್ತಿಗಳು ಹಾಗೂ ಕ್ರಯಪತ್ರಗಳ ಬಗ್ಗೆ ಹಾಗೂ ಅವರ ಮಕ್ಕಳು ಕ್ರಯಕ್ಕೆ ಕೊಟ್ಟ ಕ್ರಯಪತ್ರಗಳ ಬಗ್ಗೆ ನಾನು ಉಲ್ಲೇಖ ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಸದರಿ ಕ್ರಯಪತ್ರಗಳು ನನ್ನ ಹೆಂಡತಿಯ ಹಿಸ್ಸೆಯ ಮೇಲೆ ಊರ್ಜಿತವಾಗುವುದಿಲ್ಲ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಕ್ರಯದ ವ್ಯವಹಾರಗಳು **2004** ರ ಪೂರ್ವದಲ್ಲಿ ಆಗಿದೆ ಎಂದರೆ ಗೊತ್ತಿಲ್ಲ. ನಾನು ಸುಬ್ಬಣ್ಣನವರು ಬರೆದ ವಿಲ್ ಅಥವಾ ಕ್ರಯಪತ್ರಗಳನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸುಬ್ಬಣ್ಣನ ಹಿಸ್ಸೆಗೆ ಬಂದ **13** ಸ್ವತ್ತುಗಳನ್ನು ಅವರು ಕ್ರಯಪತ್ರ ಹಾಗೂ

ವಿಲ್ ಮೂಲಕ ವಿಲೇ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಎಲ್ಲಾ ಕ್ರಯಪತ್ರಗಳಲ್ಲಿ ಮತ್ತು ವಿಲ್ ನಲ್ಲಿ ಸುಬ್ಬಣ್ಣನವರಿಗೆ ದಿನಾಂಕ:**27.03.1983** ರ ವಿಭಾಗ ಪತ್ರದ ಮೂಲಕ ಬಂದಿರುವ ಆಸ್ತಿಗಳು, ಅದನ್ನು ಅವರು ವಿಲೇ ಮಾಡುತ್ತಿದ್ದಾರೆ ಎಂದು ಉಲ್ಲೇಖ ಇದೆ ಎಂದರೆ ಗೊತ್ತಿಲ್ಲ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ಈಗ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ. ನನ್ನ ಹೆಂಡತಿಯು ಸುಬ್ಬಣ್ಣನವರು **1995** ರಿಂದ ಮಾರಾಟ ಮಾಡಿದಂತಹ ಆಸ್ತಿಗಳ ಕ್ರಯಪತ್ರಗಳನ್ನು ಪ್ರಶ್ನಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಅಂಶವನ್ನು ನಾನೇ ವಕೀಲರಿಗೆ ಹೇಳಿ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಸದರಿ ಕ್ರಯಪತ್ರಗಳು ಅಪ್ರಸ್ತುತ ದಾಖಲಾತಿಗಳು ಎಂದು ಬರೆಸಿಲ್ಲ. **2004** ರ ಪೂರ್ವದಲ್ಲಿ ಸುಬ್ಬಣ್ಣನವರಿಗೆ ಬಂದ ಹಿಸ್ಸೆಯನ್ನು ಅವರು ವಿಲೇ ಮಾಡಿರುವ ಕಾರಣ ದಾವಾ ಆಸ್ತಿಗಳಲ್ಲಿ ನನ್ನ ಹೆಂಡತಿಗೆ ಯಾವುದೇ ಭಾಗ ಬರಬೇಕಾಗಿಲ್ಲಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.